ಹೆಚ್ಚಾಗಿಬಿಟ್ಟಿದ್ದರು. ಆದರೆ ಅಂಥ ಕರಿಯರಿಸ್ಟ್‌ಗಳೆಲ್ಲರಿಗೆ ಸರಿಯಾಗಿ ನಮ್ಮ ಬ್ಯಾಚ್ ಟೈಮಿಗೇ ಒಳ್ಳೇ ಎದುರೇಟು ಬಿತ್ತು.

ಏಕೆಂದರೆ ಅಲ್ಲಿಗೇ ನಾಲ್ಕು ವರ್ಷಗಳಿಂದ ಗವರ್ನಮೆಂಟ್ ರಿಕ್ರೂಟ್‌ಮೆಂಟುಗಳಿರಲಿಲ್ಲ. ನಿಲ್ಲಿಸಿಬಿಟ್ಟಿದ್ದರು. ಸೀನಿಯರ್ಸೇ ಸಾಕಷ್ಟು ಮಂದಿ ಖಾಲಿ ಇದ್ದರು. ಮತ್ತೊಂದು ಕಡೆ ಸರ್ವೀಸಿಗೆ ಸೇರಿದವರ ಅನುಭವಗಳೂ ಹಾರಿಬಲ್ ಆಗಿದ್ದವು. ಇನ್ನು ಉಳಿದದ್ದು ಪ್ರೈವೇಟ್ ಪ್ರಾಕ್ಟೀಸ್ ಮಾತ್ರ. ದುಡ್ಡಿದ್ದರೆ ನರ್ಸಿಂಗ್ ಹೋಮ್ ತೆರೆಯಬಹುದು. ಇಲ್ಲಾಂದರೆ ಇನ್ನೂ ಕಷ್ಟ. ಸ್ಟೆತೋಸ್ಕೋಪ್ ಹಿಡಿದುಕೊಂಡು ಒಂದು ಟೇಬಲ್ ಹಾಕಿಕೊಂಡು ಎಲ್ಲಾದರೂ ಕೂತ್ಕೋಬೇಕು.

ಆದರೆ ಆ ಕೆಲಸ ಮಾಡೋಣ ಅಂದ್ರೂ ಅಷ್ಟೊತ್ತಿಗೆ ಸಿಟಿಯೊಳಗೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ಸ್ ಬಂದುಬಿಟ್ಟು ಅಂಥದೊಂದು ಆಶೆಯನ್ನೂ ಧೈರ್ಯವನ್ನೂ ಅನುಮಾನದೊಳಗೆ ಅದ್ದಿಬಿಟ್ಟವು. ಅಪೋಲೋ, ಸಿಡಿಆರ್‌ಗಳು ದೊಡ್ಡ ಅಬ್ಬರದೊಂದಿಗೆ ಪ್ರಾರಂಭವಾದವು. ಅವುಗಳ ಹಿಂದೆ ಮೆಡ್ವಿನ್ ಕ್ಯೂನಲ್ಲಿ ನಿಂತಿತ್ತು. ದೊಡ್ಡ ದೊಡ್ಡ ಬಂಗಲೆಗಳು... ಉಸ್ಮಾನಿಯಾ ಯೂನಿವರ್ಸಿಟಿಯಲ್ಲಿ ನಾವು ಅಪ್ಪಿ ತಪ್ಪಿ ಕೂಡ ನೋಡಿರದಂಥ ಲೇಟೆಸ್ಟ್ ಇಕ್ವಿಪ್‌ಮೆಂಟ್ಸ್... ಅಲ್ಲೀವರೆಗೂ ಇದ್ದ ನಿಮ್ಸ್, ಚರ್ಚ್ ಹಾಸ್ಪಿಟಲ್‌ಗಳನ್ನಷ್ಟೆ ಅಲ್ಲ ಸಣ್ಣ ದೊಡ್ಡ ಪ್ರೈವೇಟು ಪ್ರಾಕ್ಟೀಷನರ್‌ಗಳೆಲ್ಲರನ್ನೂ ಚಾಲೆಂಜ್ ಮಾಡ್ತಾ ಅಣಕಿಸುತ್ತಾ ರಂಗಪ್ರವೇಶ ಮಾಡಿದವು. ಅನಿವಾರ್ಯವಾದ ಮಾಡರ್ನ್ ಡೆವಲಪ್‌ಮೆಂಟ್.

ಇದೆಲ್ಲಾ ನೋಡಿ ಕೇಳಿ ಏನು ಮಾಡಬೇಕೋ ತಿಳಿಯದೆ ಎಚ್ಚರ ತಪ್ಪಿದಂತಾದ ಬಹಳ ಜನ ನಮ್ಮ ಬ್ಯಾಚ್‌ಮೇಟ್ಸ್ ಅಸಲಿಗೆ ಈ ಫೀಲ್ಡಿಗೆ ಯಾಕಾದರೂ ಬಂದೆವೋ ಅಂತ ತಲೆ ಚಚ್ಚಿಕೊಂಡರು. ಇನ್ನೂ ಕೆಲವರು ನಾವು ಓದಿದ್ದೇನು, ಮಾಡಬೇಕಾಗಿದ್ದೇನು ಅಂತ ಕೂಡ ನೋಡದೆ ಐಎಎಸ್, ಐಪಿಎಸ್‌ಗಳಿಗೆ ಗುರಿಯಿಟ್ಟರೆ ಮತ್ತೂ ಕೆಲವರು ಕ್ಲಾಸ್ ಒನ್ ಪೋಸ್ಟ್‌ಗಳಿಗೆ ಪಲಾಯನ ಮಾಡಲು ಆಲೋಚಿಸಿದರು. ಈ ಪರಿಸ್ಥಿತಿಯಲ್ಲಿ, ಇಂಥ ಗಲಿಬಿಲಿಯ ಕಾಲದಲ್ಲಿ ನಾನೂ ನನ್ನ ಹಸ್ಬೆಂಡ್ ಸಿಂಪಲ್ ಎಂಬಿಬಿಎಸ್‌ಗಳೊಂದಿಗೆ ಬೀದಿ ಮೇಲೆ ಬಂದು ನಿಂತುಕೊಂಡೆವು.

ಇನ್ನು ನಾವೂ ನಮ್ಮ ಲೈಫ್ ಸ್ಟಾರ್ಟ್ ಮಾಡಬೇಕು. ಬಿಡಿಬಿಡಿಯಾಗಲ್ಲ. ಕಲೆತು. ಮದುವೆಯಾಗಿ. ಆ ಹೊತ್ತಿಗೆ ಅಪ್ಪ ಇರಲಿಲ್ಲ. ಅಮ್ಮ ಯಾವಾಗಲೋ ಹೋಗಿದ್ದಳು. ಅಕ್ಕನಿಗೆ ನೌಕರಿ ಸಿಕ್ಕು ಮದುವೆಯಾಗಿ ಸೆಟಲ್ ಆಗಿದ್ದಳು. ಆದ್ದರಿಂದ ನಮ್ಮ ಕಡೆಯಿಂದ ನಮ್ಮ ಮದುವೆಗೆ ಬೇಡ ಅನ್ನುವವರು ಯಾರೂ ಇರಲಿಲ್ಲ. ಆದರೆ ನನ್ನ ಗಂಡನ ಕಡೆಯವರಿಂದ ಮಾತ್ರ ಅದು ಅಷ್ಟು ಸುಲಭ ಆಗಲಿಲ್ಲ. ನಮ್ಮ ಮದುವೆಗೆ ಅವರು ಎಸ್ ಅನ್ನಲಿಲ್ಲ. ಹಾಗಂತ ನೋ ಅಂತ ಕೂಡ ಅನ್ನಲಿಲ್ಲ. ಜಸ್ಟ್ ಇನ್ವಾಲ್ವ್ ಆಗದಂತೆ ಸುಮ್ಮನಿದ್ದುಬಿಟ್ಟರಷ್ಟೇ. ನಮ್ಮ ಮದುವೆಯಾಯ್ತು.

ಆಮೇಲೆ ಅವರೊಂದಿಗೆ ನಮಗೆ ಹೇಳಿಕೊಳ್ಳುವಂಥ ಸಂಬಂಧ ಉಳಿಯಲಿಲ್ಲ. ನಾವಿಬ್ಬರೇ ಆದೆವು. ನನಗೆ ನನ್ನ ಗಂಡ. ನನ್ನ ಗಂಡನಿಗೆ ನಾನು. ಪ್ರಾಕ್ಟೀಸ್ ಪ್ರಾರಂಭಿಸೋಣ ಅಂದುಕೊಂಡೆವು. ಅವತ್ತಿಗೆ ಫ್ಯಾಮಿಲಿ ಡಾಕ್ಟರುಗಳ ವ್ಯವಸ್ಥೆ ಇನ್ನೂ ಬಿರುಕು ಬಿಟ್ಟಿರಲಿಲ್ಲ. ಹಾಗಾಗಿ ನಮ್ಮಂಥ ಸಣ್ಣ ಪುಟ್ಟ ಡಾಕ್ಟರು ಹೊಸದಾಗಿ ಪ್ರಾಕ್ಟೀಸ್ ಪ್ರಾರಂಭಿಸಿ ಅವರಿಂದ ಪೇಶೆಂಟ್ಸ್‌ನ ಕಿತ್ತಿಕೊಳ್ಳೋದು ಕಷ್ಟ. ಏನಾದರೂ ಛಾನ್ಸ್ ಅಂತ ಇದ್ದರೆ ಅದು ಸಬ್‌ಅರ್ಬನ್‌ಗಳಲ್ಲೇ ಅಂತ ಮನವರಿಕೆಯಾಯಿತು. ಇನ್ನೇನೂ ಆಲೋಚಿಸದೆ ನಾವು